# ಕಂದಾಯ ಸಚಿವಾಲಯ

## ಭೂಸ್ವಾಧೀನ ಕಾಯ್ದೆಯ 19(1)ನೇ ಪ್ರಕರಣದ ಮೇರೆಗೆ ಘೋಷಣೆ

ಸಂ : ಕಂಇ 20 ಭೂಸ್ವಾಧ 2018

22-03-2021

ಭಾರತ ಸರ್ಕಾರವು "The Right to Fair Compensation and Transparency in Land Acquisition, Rehabilitation And Resettlement Act – 2013" ನ್ನು ದಿನಾಂಕ 01-01-2014 ರಂದು ಜಾರಿಗೆ ಬಂದಿರುವುದರಿಂದ ಈ ಹಿಂದಿನ ಭೂಸ್ವಾಧೀನ ಕಾಯ್ದೆ 1894 ನಿರಸನಗೊಂಡಿರುತ್ತದೆ. ಭೂಸ್ವಾಧೀನ ಅಧಿನಿಯಮ (2013ನೇ ಕೇಂದ್ರ ಅಧಿನಿಯಮ) ಕಲಂ 19ರನ್ವಯ ಕೆಳಗಿನ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಜಮೀನುಗಳು ಒಂದು ಸಾರ್ವಜನಿಕ ಉದ್ದೇಶಕ್ಕಾಗಿ ಅಂದರೆ ವಾರಾಹಿ ಎಡದಂಡೆ ವಿತರಣಾ ನಾಲೆ-25ರ ನಾಲಾ ರಚನೆಗೆ ಬೇಕಾಗುವುದೆಂದು ಈ ಮೂಲಕ ಘೋಷಿಸಲಾಗಿದೆ.

ಸದರಿ ಭೂಸ್ವಾಧೀನ ಅಧಿನಿಯಮ 3ನೇ ಪ್ರಕರಣ (ಜಿ) ಖಂಡದ ಮೇರೆಗೆ ಭೂಸ್ವಾಧಿನಾಧಿಕಾರಿ ಮತ್ತು ಸಹಾಯಕ ಕಮೀಷನರ್ ಕುಂದಾಪುರ ಇವರನ್ನು ಸದ್ರಿ ಜಮೀನಿನಲ್ಲಿ ಮುಂದಿನ ಎಲ್ಲಾ ಕಾನೂನು ಕ್ರಮಗಳನ್ನು ತೆಗೆದುಕೊಳ್ಳಲು ಜಿಲ್ಲಾಧಿಕಾರಿಯವರ ಪ್ರಕಾರ ಈ ಕಾರ್ಯಗಳನ್ನು ನಿರ್ವಹಿಸುವಂತೆ ಈ ಮೂಲಕ ನಿಯಮಿಸಲಾಗಿದೆ. ಜಮೀನಿನ ಅಧೀಕೃತ ಸಂಗ್ರಹಣೆಗಾಗಿ ಆದೇಶಗಳನ್ನು ಪಡೆಯುವಂತೆ ಸದರಿ ಅಧಿನಿಯಮ ಪ್ರಕರಣ 20 ರ ಮೇರೆಗೆ ನಿರ್ದೇಶಿಸಲಾಗಿದೆ.

ಭೂಸ್ವಾಧೀನ ಅಧಿನಿಯಮದ ಅನುಸೂಚಿ-2ರ ಮತ್ತು ಕಲಂ 31ರ ಅನ್ವಯ ಪುನರ್‌ವಸತಿ ಹಾಗೂ ಪುನರ್ ವ್ಯವಸ್ಥೆಯ ಐತೀರ್ಪು ರಚಿಸಲಾಗುವುದು ಎಂದು ಉದ್ದೇಶಿಸಲಾಗಿದೆ.

19(1)ರ ಅಡಿಯಲ್ಲಿ ಸೂಚಿಸಿದಂತೆ 15(2)ರನ್ವಯ 15(1) ರ ನಿಗದಿತ ನಮೂನೆಯಲ್ಲಿ ಆಕ್ಷೇಪಣೆಗೆ ಸಂಬಂಧಿಸಿದಂತೆ ಸರಕಾರದ ಆದೇಶ ಸಂಖ್ಯೆ ಕಂಇ 20 ಭೂಸ್ವಾಧ 2018 ದಿನಾಂಕ 24-12-2018 ರಂತೆ ಒಪ್ಪಿಗೆ ಪಡೆಯಲಾಗಿದೆ. ಸದ್ರಿ ಅಧಿನಿಯಮ ಕಲಂ 18ರನ್ವಯ ಪುನರ್‌ವಸತಿ. ಪುನರ್ ವ್ಯವಸ್ಥೆಯ ಸಾರಾಂಶ ಅನುಮೋದಿತ ಕರಡು ಯಾದಿಯನ್ನು ಕಲಂ 19(2)ರನ್ವಯ ಘೋಷಿಸಲಾಗಿದೆ.

ಸದ್ರಿ ಅಧಿನಿಯಮದ ಕಲಂ 21ನೇ ಉಪಕಲಂ (1)ರಲ್ಲಿ ಪ್ರಕಟಿಸಲಾದ ಈ ನೋಟೀಸಿನ ಪ್ರಕಟಣೆ ನಂತರ ಭೂಮಿ ಸ್ವಾಧೀನಪಡಿಸಿಕೊಳ್ಳಬೇಕೆಂದು ಸರಕಾರವು ನಿರ್ದೇಶಿಸಿದೆ.

ಸದ್ರಿ ಜಮೀನಿನ ವಿವರವನ್ನು ಸೂಚಿಸುವ ಒಂದು ನಕ್ಷೆಯನ್ನು ಸಾರ್ವಜನಿಕರ ಮಾಹಿತಿಗಾಗಿ ಭೂಸ್ವಾಧೀನಾಧಿಕಾರಿ ಮತ್ತು ಸಹಾಯಕ ಕಮೀಷನರ್ ಕುಂದಾಪುರ ಇವರ ಕಛೇರಿಯಲ್ಲಿ ಇಡಲಾಗಿದೆ.

ಜಿಲ್ಲೆ : ಉಡುಪಿ ತಾಲೂಕು : ಕುಂದಾಪುರ ಹೋಬಳಿ : ಕುಂದಾಪುರ ಗ್ರಾಮ ಹಳ್ನಾಡಿ ಹರ್ಕಾಡಿ

| ಕ್ರ.ಸಂ | ಖಾತೆದಾರರ ಹೆಸರು | ಸ.ನಂಬ್ರ | ಜಮೀನಿನ ತರಹೆ | ಭೂಸ್ವಾಧೀನ ವಿವರ | |
|---|---|---|---|---|---|
| | | | | ವಿಸ್ತೀರ್ಣ (ಎ-ಸೆ) | ಮೌಲ್ಯ |
| 1 | ಸುಶೀಲ ಶೆಡ್ತಿ ಕೋಂ ಶೇಖರ ಶೆಟ್ಟಿ<br>ಇತರ ಹಿತಾಸಕ್ತಿದಾರರು:<br>ವ್ಯವಸ್ಥಾಪಕರು ಮೊಳಹಳ್ಳಿ ವ್ಯವಸಾಯ ಸೇವಾ ಸಹಕಾರಿ ಬ್ಯಾಂಕ್ ನಿಯಮಿತ. ಬಿದ್ಕಲ್ ಕಟ್ಟೆ | 17/26 | ತರಿ | 0.0725 | 0.33 |

ಸಹಿ/

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ.

ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ(ಭೂಸ್ವಾಧೀನ-1 ಮತ್ತು 3

Scanned by CamScanner